ಆ. ಇಲ್ಲ.

ಜಿಲ್ಲಾಧಿಕಾರಿ ಚಾಮರಾಜನಗರ ಜಿಲ್ಲೆ, ಇವರು ತಿಳಿಸಿರುವಂತೆ ನವೆಂಬರ್ 2001ರಿಂದ ಜೂನ್ 2002ರ ವರೆಗೆ ರೂ. 1,75,72,162.00 ಕಾರ್ಮಿಕರ ವೇತನ ಬಾಕಿ ಇರುತ್ತದೆ. ಈ ಮೊತ್ತವನ್ನು ಕಾರ್ಖಾನೆಯಿಂದ ಕೈಗಾರಿಕಾ ವಿವಾದಗಳ ಕಾಯ್ದೆ ಪ್ರಕಾರ ಭೂ ಕಂದಾಯ ಬಾಕಿ ಎಂದು ಪರಿಗಣಿಸಿ, ವಸೂಲಿ ಮಾಡಲು ಉಪ ಕಾರ್ಮಿಕ ಆಯುಕ್ತರು, ವಸೂಲಿ ಪ್ರಮಾಣ ಪತ್ರ ನೀಡಿರುವುದಾಗಿ ಜಿಲ್ಲಾಧಿಕಾರಿಗಳು, ಚಾಮರಾಜನಗರ ಜಿಲ್ಲೆ, ಇವರು ತಿಳಿಸಿರುತ್ತಾರೆ.

ಈ ಮಧ್ಯೆ ರೋಬೋ ಬ್ಯಾಂಕ್ ಪ್ರಕರಣಗಳಲ್ಲಿ ಮಾನ್ಯ ಮುಂಬೈ ಉಚ್ಚ ನ್ಯಾಯಾಲಯವು ನೀಡಿರುವ ತೀರ್ಪುಗಳ ಪ್ರಕಾರ, ಕಾರ್ಖಾನೆಯ ಸಕ್ಕರೆ ದಾಸ್ತಾನು ಮಾರಾಟ ಮಾಡಿ, ಬಂದ ಮೊತ್ತದಿಂದ ರೈತರ ಬಿಲ್ ಬಾಕಿಯನ್ನು ಪಾವತಿಸಿದ ನಂತರ, ಅದನ್ನು ಮುಂಬೈ ಉಚ್ಚ ನ್ಯಾಯಾಲಯದ ಗಮನಕ್ಕೆ ತಂದು ಕಾರ್ಮಿಕರ ಬಾಕಿಯನ್ನು ಪಾವತಿಸಲು ಮುಂಬೈ ಉಚ್ಚ ನ್ಯಾಯಾಲಯದಿಂದ ಆದೇಶ ಪಡೆಯಬೇಕಾಗಿರುತ್ತದೆ. ಈ ಬಗ್ಗೆ ಈಗಾಗಲೇ ಅಗತ್ಯ ಅರ್ಜಿಯನ್ನು ನ್ಯಾಯಾಲಯದಲ್ಲಿ ಸಲ್ಲಿಸಲಾಗಿದ್ದು, ದಿನಾಂಕ: 19.12.2002ರಂದು ಇದ್ದ ಪ್ರಕರಣವು 4 ವಾರಗಳಷ್ಟು ಕಾಲ ಮುಂದೂಡಲ್ಪಟ್ಟಿರುತ್ತದೆ.

ಆದ್ದರಿಂದ ಈ ಬಗ್ಗೆ ಮಾನ್ಯ ಮುಂಬೈ ಉಚ್ಚ ನ್ಯಾಯಾಲಯದ ಆದೇಶ ಪಡೆದ ನಂತರ, ಕಾರ್ಮಿಕರ ಬಾಕಿ ವೇತನ ಕಾರ್ಮಿಕರಿಗೆ ಪಾವತಿಸಲು ಜಿಲ್ಲಾಧಿಕಾರಿಗಳು ಕ್ರಮ ತೆಗೆದುಕೊಳ್ಳಬೇಕಾಗಿರುತ್ತದೆ.

ದಿನಾಂಕ 26.12.2002ರ ಚುಕ್ಕೆ ಗುರುತಿಲ್ಲದ ಪ್ರಶ್ನೋತ್ತರಗಳು

ಪುತ್ತೂರು ತಾಲ್ಲೂಕು ಕೊಯಿಲಾ ಕೆ.ಸಿ. ಫಾರ್ಮ ಒತ್ತುವರಿ

1780(2244): ಶ್ರೀ ಅಂಗಾರ ಎನ್. (ಸೂಳ್ಯ) : ಮಾನ್ಯ ರೇಷ್ಮೆ ಹಾಗೂ ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ಸೂಳ್ಯ ವಿಧಾನಸಭಾ ಕ್ಷೇತ್ರ ವ್ಯಾಪ್ತಿಗೆ ಒಳಪಟ್ಟು ಪುತ್ತೂರು ತಾಲ್ಲೂಕು ಕೊಯಿಲಾ ಕೆ.ಸಿ. ಫಾರ್ಮ್ ಹಾಗೂ ರೇಷ್ಮೆ ಕೃಷಿಗಾಗಿ ಕಾದಿರಿಸಲಾದ ಸ್ಥಳ ಎಷ್ಟು?

ಆ. ಯಾವ ಯಾವ ಸರ್ವೆ ನಂಬರ್‌ಗಳಲ್ಲಿ ಎಷ್ಟೆಷ್ಟು ಸ್ಥಳವಿದೆ. ಇದರಲ್ಲಿ ಎಷ್ಟು ಕುಟುಂಬಗಳು ಅನಧಿಕೃತವಾಗಿ ಒತ್ತುವರಿಯನ್ನು ಮಾಡಿಕೊಂಡಿರುವ ಕುಟುಂಬಗಳವಾರು ವಿಸ್ತೀರ್ಣವಾರು ವಿವರ ಒದಗಿಸುವುದು?

ಶ್ರೀ ಹೆಚ್.ಎಂ. ರೇವಣ್ಣ (ರೇಷ್ಮೆ ಹಾಗೂ ಜವಳಿ ಸಚಿವರು)

ಅ. ರೇಷ್ಮೆ ಕೃಷಿ ಕ್ಷೇತ್ರಕ್ಕೆ ಒಟ್ಟು 50.00 ಎಕರೆ ಜಮೀನನ್ನು ನೀಡಲಾಗಿದ್ದು. ಇದರಲ್ಲಿ 20.00 ಎಕರೆ ಜಮೀನನ್ನು ಇಲಾಖೆಯು ಉಪಯೋಗಿಸುತ್ತಿದ್ದು, ಇದರಲ್ಲಿ ಹಿಪ್ಪನೇರಳೆ ವಿಸ್ತೀರ್ಣ 3.00 ಎಕರೆಗಳು.

ಆ. ಒಟ್ಟು 20 ಎಕರೆ ಜಮೀನಿನ ಸರ್ವೆ ನಂಬರುಗಳು

299:1

299:2

299:3 ಮತ್ತು 293

ಇಲಾಖೆಯ ವಶದಲ್ಲಿರುವ 20 ಎಕರೆ ಜಮೀನಿಗೆ ಬೇಲಿ ಹಾಕಿದ್ದು ಇದರಲ್ಲಿ ಯಾವುದೇ ಜಮೀನು ಒತ್ತುವರಿಯಾಗಿರುವುದಿಲ್ಲ. ಆದರೆ ಸಾಮಾಜಿಕ ಅರಣ್ಯಕ್ಕೆ ನೀಡಿರುವ 30 ಎಕರೆಗಳಲ್ಲಿ 1977 ರಿಂದ 2001 ರವರೆಗೆ 8 ಕುಟುಂಬಳಿಂದ 6.10 ಎಕರೆ ಒತ್ತುವರಿ ಮಾಡಿಕೊಂಡಿರುವ ಬಗ್ಗೆ ಗಮನಿಸಲಾಗಿದೆ.

ಸೂಳ್ಯ ತಾಲ್ಲೂಕಿನಲ್ಲಿ ಗಣಿಗಾರಿಕೆಯಿಂದ ಬರುತ್ತಿರುವ ಆದಾಯ

1781(2245): ಶ್ರೀ ಅಂಗಾರ ಎಸ್. (ಸೂಳ್ಯ) : ಮಾನ್ಯ ಗಣಿ ಮತ್ತು ಭೂವಿಜ್ಞಾನ ಹಾಗೂ ಅಂತರ್ಜಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ಸುಳ್ಯ ತಾಲ್ಲೂಕಿನ ಯಾವ ಯಾವ ಗ್ರಾಮಗಳಲ್ಲಿ ಯಾವ ಗಣಿಗಾರಿಕೆಯನ್ನು ಮಾಡಲಾಗುತ್ತಿದೆ; ಎಷ್ಟೆಷ್ಟು ವಿಸ್ತೀರ್ಣದಲ್ಲಿ ಮಾಡಲಾಗುತ್ತಿದೆ.

ಆ. ಇದರಿಂದ ಸರ್ಕಾರಕ್ಕೆ ಬರುವ ತೆರಿಗೆ ಎಷ್ಟು; ಪೂರ್ತಿ ವಿವರ ನೀಡುವುದು;

ಇ. ಸದರಿ ಗಣಿಗಾರಿಕೆಯಿಂದ ಕಲ್ಲುಗಳನ್ನು ಹೆಚ್ಚು ಸಾಗಿಸುತ್ತಿರುವುದರಿಂದ ಗ್ರಾಮಾಂತರ ಪ್ರದೇಶದಲ್ಲಿರುವ ಡಾಂಬರು ರಸ್ತೆ ಹಾಗೂ ಕಚ್ಚಾ ರಸ್ತೆಗಳು ಕೆಟ್ಟು ಹೋಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ. ಬರದಿದ್ದಲ್ಲಿ, ಗಣಿ ಇಲಾಖೆಯು ಕೈಗೊಂಡ ಕ್ರಮಗಳೇನು?

ಶ್ರೀ ವಿ. ಮುನಿಯಪ್ಪ (ಗಣಿ ಮತ್ತು ಭೂವಿಜ್ಞಾನ ಹಾಗೂ ಅಂತರ್ಜಲ ಸಚಿವರು)

ಅ. ಮುರಕಲ್ಲು, ಕಟ್ಟಡ ಕಲ್ಲು, ಸಾಮಾನ್ಯ ಮರಳಿಗಾಗಿ ಕಲ್ಲು ಗಣಿ ಗುತ್ತಿಗೆಗಳನ್ನು ಈ ಕೆಳಕಂಡ ಗ್ರಾಮಗಳಲ್ಲಿ ನೀಡಿದೆ.

ಕ್ರಮ ಸಂಖ್ಯೆ	ಗ್ರಾಮ	ಖನಿಜ	ಗುತ್ತಿಗೆಗಳ ಸಂಖ್ಯೆ	ವಿಸ್ತೀರ್ಣ ಎಕರೆಯಲ್ಲಿ
1.	ದೇವಚಲ	ಕಟ್ಟಡಕಲ್ಲು	14	7.15
2.	ಅಜ್ಜಾವರ	ಮುರಕಲ್ಲು	10	5.90
3.	ಸಂಪಾಜಿ	ಮುರಕಲ್ಲು	3	1.50
4.	ಮುಂಡೇಕೋಲು	ಮುರಕಲ್ಲು	1	0.50
5.	ಯೇನೆಕಲ್ಲು	ಮುರಕಲ್ಲು	3	1.50
6.	ಅಮರ ಪಡ್ನೂರು	ಮುರಕಲ್ಲು	3	1.50
7.	ಮರಕಂಜ	ಕಟ್ಟಡಕಲ್ಲು	1	0.50
8.	ನಾಲ್ಕುರು	ಮುರಕಲ್ಲು	1	0.50
9.	ಜಾಲ್ಸೂರು	ಮುರಕಲ್ಲು	1	0.50
10.	ಗುತ್ತಿಗಾರು	ಕಟ್ಟಡಕಲ್ಲು	1	0.50
11.	ಸುಬ್ರಹ್ಮಣ್ಯ	ಮುರಕಲ್ಲು	1	2.00

ಇದಲ್ಲದೆ, ನೆಲ್ಲೂರು-ಕಮ್ರಾಜ್ ಗ್ರಾಮದಲ್ಲಿ 6-00 ಎಕರೆಯಲ್ಲಿ ಮೆ: ಮಣಿ ಮೈನ್ಸ್ ಅಂಡ್ ಮಿನರಲ್ಸ್ ರವರಿಗೆ ಕೊರಂಡಮ್ ಖನಿಜಕ್ಕೆ ಅನ್ವೇಷಣಾ ಲೈಸೆನ್ಸ್ ಸಂಖ್ಯೆ: 3345ನ್ನು ಎರಡು ವರ್ಷಗಳ ಅವಧಿಗೆ ದಿನಾಂಕ: 03.5.2002 ರಿಂದ ನೀಡಿದೆ.